ವಿಭಾಗಾಧಿಕಾರಿಗಳು ತಿಳಿಸಿದ್ದು, ಹಾಗೂ ಭೂ ಸ್ವಾಧೀನ ಕಾಯ್ದೆ ಪ್ರಕಾರ 4(1) ತಿಳುವಳಿಕೆ ನೋಟೀಸ್ ಆಗುವ ಮುನ್ನ ಶೇ. 25 ರಷ್ಟು ಹಣವನ್ನು ಜಮಾ ಮಾಡಲು ತಿಳಿಸಿದ ಪ್ರಕಾರ, ಈಗಾಗಲೇ ರೂ. 1 ಲಕ್ಷವನ್ನು ಮಂಡಳಿಯು ಜಮಾ ಮಾಡಿದೆ. ಮುಂದಿನ ಸೂಚನೆಗಳನ್ನು ನಿರೀಕ್ಷಿಸಲಾಗಿದ್ದು, ಬಿಜಾಪುರ ಉಪ ವಿಭಾಗದ ಉಪ ವಿಭಾಗಾಧಿಕಾರಿಗಳಿಂದ ಬಾಕಿ ಹಣವನ್ನು ಪಾವತಿ ಮಾಡಲು ತಿಳುವಳಿಕೆ ಪತ್ರ ಬಂದ ನಂತರ, ಆದಷ್ಟು ಜಾಗ್ರತೆ ಬಾಕಿ ಹಣವನ್ನು ಪಾವತಿ ಮಾಡಲಾಗುವುದು.

4) ಸದರಿ ಸ್ಟೇಷನ್ ನಿರ್ಮಾಣ ಕಾರ್ಯವನ್ನು ಮೇ 2000 ರ ಅಂತ್ಯದೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಈ ಕಾಮಗಾರಿಯು ಫಾಸ್ಟ್ ಟ್ರ್ಯಾಕ್ ಯೋಜನೆಗಳಡಿಯಲ್ಲಿ ಸೇರಿದೆ. ಅಲ್ಲದೇ ಸದರೀ ಕಾಮಗಾರಿಯನ್ನು ಟರ್ನ್‌ಕೀ ಆಧಾರದ ಮೇಲೆ ನಿರ್ವಹಿಸುವ ಬಗ್ಗೆಯೂ ಆಲೋಚಿಸಲಾಗುತ್ತಿದೆ. ಇದಕ್ಕೆ ಗ್ರಾಮೀಣ ವಿದ್ಯುದೀಕರಣ ನಿಗಮದ ಸಾಲ ಸೌಲಭ್ಯವು ಮಾರ್ಚ್ 99 ರಲ್ಲಿ ಮಂಜೂರಾಗಿರುತ್ತದೆ. ಈ ವರ್ಷದ (1999-2000) ಆಯವ್ಯಯದಲ್ಲಿ ಈ ಕೆಲಸಕ್ಕಾಗಿ 650 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಕೃಷ್ಣ ಮೇಲ್ದಂಡೆ ಯೋಜನೆಯ ಕಾರ್ಯವು ಪೂರ್ಣಗೊಳ್ಳುತ್ತಿದ್ದಂತೆ ಮಮದಾಪುರ ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ ಹಾಲಿ ವಿದ್ಯುತ್ ಸರಬರಾಜು ಮಾಡುತ್ತಿರುವ ವಿದ್ಯುತ್ ಲೈನ್ ಗಳು ಮುಳುಗಡೆ ಹೊಂದುವುದರಿಂದ, ಮಮದಾಪುರದಲ್ಲಿ 110 ಕೆ.ವಿ. ಸಬ್-ಸ್ಟೇಷನ್ ಸ್ಥಾಪನೆ ಅಗತ್ಯವಾಗಿರುತ್ತದೆ.

ಹೊಸ ಕೆ.ಇ.ಬಿ. ವೃತ್ತ ಕಛೇರಿಗಳ ಮಂಜೂರಾತಿ.

1651(2235) ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಪ್ಪ (ತಿಕೋಟ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಕೆ.ಇ.ಬಿ. ಕಛೇರಿಗಳಿಗೆ ಕಳೆದ 4 ವರ್ಷಗಳಿಂದೀಚೆಗೆ ಎಷ್ಟು ಹೊಸ ವೃತ್ತ ಕಛೇರಿಗಳಿಗೆ ಮಂಜೂರಾತಿ ನೀಡಲಾಗಿದೆ. (ವಿವರವಾದ ಮಾಹಿತಿ ಒದಗಿಸುವುದು);

ಆ) ಬಿಜಾಪುರ ಜಿಲ್ಲೆಗೆ ವೃತ್ತ ಕಛೇರಿ ಅವಶ್ಯಕತೆ ಇರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಮಂಜೂರಾತಿ ನೀಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ರಾಜ್ಯದಲ್ಲಿ ಕೆ.ಇ.ಬಿ.ಯ ಒಟ್ಟು 1,298 ಕಾರ್ಯ ಮತ್ತು ಪಾಲನಾ ಕಛೇರಿಗಳಿವೆ. ಅದರ ವಿವರಗಳು ಈ ಕೆಳಕಂಡಂತಿದೆ.

1.	ವಲಯ ಕಛೇರಿ	-	4
2.	ವೃತ್ತ ಕಛೇರಿ	-	10
3.	ವಿಭಾಗೀಯ ಕಛೇರಿ	-	55
4.	ಉಪ-ವಿಭಾಗೀಯ ಕಛೇರಿ	-	254
5.	ಶಾಖಾ ಕಛೇರಿ	-	975
		ಒಟ್ಟು	1298

ಕಾರ್ಯ ಮತ್ತು ಪಾಲನಾ ವಲಯ ಮತ್ತು ವೃತ್ತ ಕಛೇರಿಗಳ ಕೇಂದ್ರ ಕಾರ್ಯಸ್ಥಾನಗಳ ವಿವರಗಳು ಈ ಕೆಳಕಂಡಂತಿವೆ.

	ವಲಯ ಕಛೇರಿ		ವೃತ್ತ ಕಛೇರಿ
1.	ಬೆಂಗಳೂರು	1.	ಬೆಂಗಳೂರು ದಕ್ಷಿಣ
		2.	ಬೆಂಗಳೂರು ಉತ್ತರ
		3.	ತುಮಕೂರು
2.	ಮಂಗಳೂರು	4.	ಮಂಗಳೂರು
		5.	ಮೈಸೂರು
		6.	ಶಿವಮೊಗ್ಗ
3.	ಹುಬ್ಬಳ್ಳಿ	7.	ಹುಬ್ಬಳ್ಳಿ
		8.	ಬೆಳಗಾಂ
4.	ಗುಲ್ಬರ್ಗಾ	9.	ಗುಲ್ಬರ್ಗಾ
		5.	ಮುನಿರಾಬಾದ್

ಕಳೆದ 4 ವರ್ಷಗಳಿಂದೀಚೆಗೆ ಯಾವುದೇ ಹೊಸ ವೃತ್ತ ಕಛೇರಿಯನ್ನು ಮಂಜೂರು ಮಾಡಿರುವುದಿಲ್ಲ.

ಆ), ಇ) ವಿಜಾಪುರದಲ್ಲಿ ವೃತ್ತ ಕಛೇರಿ ತೆರೆಯುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.